ಸುಕ್ಕುಗಿಕ್ಕುಗಳೂ ಮತ್ತೂ ಆರಾಮಾಗಿ ವಿರಮಿಸುವವು. ಇಂತಿಪ್ಪ ರೇಣುಯುಕ್ತಿಯ ಇರುಸುಮುರುಸಿನ ಜಬರದಸ್ತಿಯೇನೆಂದು, ಅವಳು ಫೋನು ಕುಕ್ಕಿದ ರಭಸಕ್ಕೆಲ್ಲ ರುದ್ರನೀಲ ಥಾಪಸೆಗೆ ಅರ್ಥವಾಗಿಬಿಟ್ಟಿತು! ಮೂವ್ವತ್ತಾರು ಕಾಲದಿಂದ ಇವಳೊಡನೆ ನಡೆದಿರುವುದೇ ಇದು ತಾನೇ... ಎಂದಂದುಕೊಂಡು ಅವನು ಸುಮ್ಮನಾದ. ಸುಮ್ಮನಾದನೆಲ್ಲಿ, ಬೆಳಬೆಳಗ್ಗಿನ ಅವೇಳೆಯಲ್ಲಿ ಕರೆದವರ ದರ್ದೇನಂತ ತಾನೂ ಶಪಿಸಿಕೊಂಡುಳಿದ.

ರುದ್ರನೀಲ ಥಾಪಸೆ ಪ್ರಾತಃಕರ್ಮದ ಬಗ್ಗೆ ತುಸುವೇ ತಿಳಿಹೇಳುವುದಾದರೆ ಇವನು ಬೆಳಿಗ್ಗೆ ಐದಕ್ಕೆಲ್ಲ ಎದ್ದು, ಶೌಚ ಮುಗಿಸಿ, ಮುಂಬಾಲಿಗೆ ಬಂದು ಚಪ್ಪಲಿ ಮೆಟ್ಟಿ, ಕದವೆಳೆದುಕೊಂಡು, ಬೀದಿಗಿಳಿದು ಇಡೀ ಬಡಾವಣೆಯಲ್ಲೆಲ್ಲ ವಾಕಿಂಗುನಿಮಿತ್ತ ತನ್ನ ಧಡೂತಿಮೈಯಲುಗಿಸುತ್ತ ಅಡ್ಡಾಡಿಕೊಂಡು, ತಾನೇ ಆಗಾಗ ಆಡಿಕೊಳ್ಳುವ ಹಾಗೆ, ಅವರಿವರ ಮನೆಯ ಕಂಪೋಂಡಿನೊಳಗಿಂದ ಹೊರಮೋರಿಗೂ ಆಚೆ ಖುದ್ದು ಗಡೀಪಾರುಗೊಂಡಿವೆಯೆಂಬಂತೆ ಬಾಗಿರುವ ಗಿಡಗಳಿಂದ, ಹೊಸ ಹಗಲಿನರಳುಗಳಂತೆ ತೆರೆದ ಹೂವುಗಳನ್ನು ಕೈಗೆಟುಕುವಷ್ಟು ಕದ್ದು, ದೋಚಿ... ಲೂಟಿಗೈದು... ವಾಪಸಾಗಿ, ಮರಳಿ ಮುಂಗದೆದುರು ಬೆಲ್ಲು ಮಾಡುತ್ತಿರುವಾಗ, ಇವನ ನಿದ್ರಾಲೋಲುಪ ಮಡದಿಯಾದ ರೇಣು, ಎಂಥದೋ ಹಕ್ಕೊತ್ತಾಯಕ್ಕೆ ಮಣಿದು, ಹೊದ್ದ ಹೊದಿಕೆ ಬದಿಯಾಗಿಸಿ ಮಂಚದಿಂದಿಳಿದೆದ್ದು ಬಂದು, ಆಕಳಿಸಿಕೊಂಡೇ ನಿದ್ದೆಯಲ್ಲಿ ಸರಿದುಹೋದ 'ನಿನ್ನೆ'ಯನ್ನಿನ್ನೂ ಕಣ್ರೆಪ್ಪೆಸುರಿನಲ್ಲಿಟ್ಟುಕೊಂಡು, ಒಲ್ಲದ ಮನಸ್ಸಿನಿಂದ ಬಾಗಿಲು ತೆರೆದು, ಅವನತ್ತ ಕಣ್ಣು ಕೂಡ ಹಾಯಿಸದೆ ಸೀದಾ ಬಾತ್ರೂಮು ತಲುಪಿ ಮರೆಯಾಗುವಳು. ಇವನು ಬಾಗಿಲಿನಲ್ಲಿ ಸದ್ದಿರದೆ ಬಿದ್ದ ಸುದ್ದಿಗಳ ಹೆರಾಲ್ಡು, ಎಕ್ಸ್‌ಪ್ರೆಸ್ಸು, ಟೈಮ್ಸಿತ್ಯಾದಿಗಳ ಗದ್ದಲವನ್ನು ಎಡಗೈಯಲ್ಲಿ ಹೆಕ್ಕಿ, ಬಲಗೈಯಲ್ಲಿ ಕಲೆ ಹಾಕಿಕೊಂಡು ತಂದ ಹೂವನ್ನು ನಾಲ್ಕಾರು ನ್ಯೂಸಿನ ಪೇಪರುಗಳೊಡಬದಿಗೇ ಮನೆಯ ಲಿವಿಂಗ್‌ರೂಮನ್ನೂ ಡೈನಿಂಗುಕೋಣೆಯನ್ನೂ ಏಕಯಿಸಿಕೊಂಡು ಬದಿಹಾಯುವ ನಡುಗೋಡೆಯಲ್ಲಿರುವ ಬಡುವಿನಲ್ಲಿರಿಸಿ, ಅದೇ ಬಡುವಿನಲ್ಲಿರುವ ಪುಟ್ಟನೆ ದೇವರಗೂಡನ್ನೂ ಅದರೊಳಗಿರುವ ಒಂದೆರಡು ಹಿಂದೂದೇವರುಗಳನ್ನೂ, ಅದೇ ಗೂಡಿನ ಕಟ್ಟಿಗೆಯ ಕಟಾಂಜನದಂತಹ ಪಟ್ಟಿಯಲ್ಲಿ ತೂಗುವ ಶಿಲುಬೆಯುಳ್ಳ ಜಪಾಮಾಲೆಯನ್ನೂ, ಅದೇ ಪಟ್ಟಿಯ ಮೇಲಿರುವ ತೋರುಬೆರಳುದ್ದದ ಸಿರಾಮಿಕಿನ ಹೊರಮೈಯುಳ್ಳ ಗಾಂಧೀಪ್ರತಿಮೆಯನ್ನೂ... ಪ್ರತಿಮೆಯ ಎಡಕ್ಕೆ ಗೋಡೆಯನ್ನಂಟಿರುವ ಕಿರುಚಂದ್ರ ಮತ್ತದರ ಬಾಗೊಳಗಿರುವ ನಕ್ಷತ್ರದ ತಾಮ್ರಫಲಕವನ್ನೂ... ಹೀಗೆ, ತನ್ನ ಹುಟ್ಟಿನೊಟ್ಟಿಗೇ ಬೆಸೆದುಕೊಂಡಿದ್ದಲ್ಲದೆ ಬದುಕುದ್ದಕ್ಕೂ ನಂಬಗೊಟ್ಟ 'ನೆಹರೂ'ವೀಯ 'ಸೆಕ್ಯುಲರಿಕೆ'ಯ ಒಟ್ಟಾರೆ ಮೊಹರನ್ನೂ, ಏಕತ್ರ ಗಮನಿಸಿ, ಒಂದು ಸಾರಿ ಧ್ಯಾನಸ್ಥವಾಗಿ ಕಣ್ಮುಚ್ಚಿ ಮನಸ್ಸೊಳಗೇ ಅದಕ್ಕೆರಗಿ, ಸೀದಾ ಇನ್ನೊಂದು ಬಚ್ಚಲುಮನೆ ಹೊಕ್ಕು ಐದೆಂಟು ಮಿನಿಟುಗಳಲ್ಲಿ ಮಿಂದು, ವಾಪಸಾಗಿ, ಒಂದಷ್ಟು ಹೂವನ್ನು ಅವವೇ ದೇವರುಗಳೆದುರು ಚೆಲ್ಲಿ, 'ಅದೇನೋ' ಪಿಟಿಪಿಟಿಸುವ ಸುಮಾರಿಗೆ, ಊಟದ ಮೇಜಿನಲ್ಲಿ ರೇಣು, ಎರಡು ಪಿಂಗಾಣಿಯ ಕಪ್ಪುಗಳಲ್ಲಿ ಚಹಾ ತುಂಬಿಕೊಂಡು, ಗಂಡನನ್ನು ಹೊಸ ದಿವಸಕ್ಕಣಿಗೊಳಿಸಲು ಕಾದಿರುತ್ತಾಳೆ. ಇಬ್ಬರೂ ಟೀ ಹೀರಿಕೊಂಡು, ಮಹಾ ಮಹಾ ಆರಾಮದಲ್ಲಿ, ಹೊಸ ದಿವಸದ ಮೊಟ್ಟ ಮೊದಲ ಲೋಕಾಭಿರಾಮವನ್ನು ಪೂರೈಸುವ ಹೊತ್ತಿಗೆ, ಲಿವಿಂಗುಕೋಣೆಯಲ್ಲಿರುವ ಗಡಿಯಾರವು ಸದ್ದಿರದೆ ಎಂಟು ದಾಟತೊಡಗಿರುತ್ತದೆ. ಅರವತ್ತೈದು ವಯಸ್ಸಿನ ಕಡು ಮರಾಠೀಮೂಲದ